ಊ) ರೇಷ್ಮೆ ಸಮಗ್ರ ಅಭಿವೃದ್ಧಿ ದೃಷ್ಟಿಯಿಂದ ನಷ್ಟ ಅನುಭವಿಸುತ್ತಿರುವ ಕಾರ್ಖಾನೆಗಳನ್ನು ಮುಂದುವರೆಸಲು ಪ್ರಯತ್ನ ಮಾಡಲಾಗುವುದೇ?

ಋ) ರೇಷ್ಮೆ ಕಾರ್ಖಾನೆಗಳ ಪುನಃ ನವೀಕರಣ ಮತ್ತು ಪುನಶ್ಚೇತನಕ್ಕಾಗಿ ಸರ್ಕಾರದ ಗುರಿ ಏನು?

ಡಾ. ಜಿ. ಪರಮೇಶ್ವರ (ರೇಷ್ಮೆ ರಾಜ್ಯ ಸಚಿವರು) :

ಅ) 1) ಸರ್ಕಾರಿ ರೇಷ್ಮೆ ಕಾರ್ಖಾನೆ, ಕೊಳ್ಳೇಗಾಲ
2) ಸರ್ಕಾರಿ ರೇಷ್ಮೆ ಕಾರ್ಖಾನೆ, ಸಂತೇಮರಹಳ್ಳಿ
3) ಸರ್ಕಾರಿ ರೇಷ್ಮೆ ಕಾರ್ಖಾನೆ, ಮಾಂಬಳ್ಳಿ
4) ಸರ್ಕಾರಿ ರೇಷ್ಮೆ ಕಾರ್ಖಾನೆ, ಚಾಮರಾಜನಗರ.

ಆ) ಪ್ರಾರಂಭವಾದ ವರ್ಷಪ್ರಾರಂಭದಲ್ಲಿದ್ದ ಬೇಸಿನ್ಗಳ ಸಂಖ್ಯೆ

1)	ಕೊಳ್ಳೇಗಾಲ	1956-57	464
2)	ಸಂತೇಮರಹಳ್ಳಿ	1970-71	120
3)	ಮಾಂಬಳ್ಳಿ	1970-71	110
4)	ಚಾಮರಾಜನಗರ	1970-71	120

ಇ)

	ಈಗ ಇರುವ ಬೇಸಿನ್ಗಳ ಸಂಖ್ಯೆ ಈ ಕೆಳಗಿನಂತಿವೆ		ಇಲ್ಲಿಯವರೆಗೆ ಆದ ನಷ್ಟ ರೂ. ಲಕ್ಷಗಳಲ್ಲಿ
1)	ಕೊಳ್ಳೇಗಾಲ	50	1060.65
2)	ಸಂತೇಮರಹಳ್ಳಿ	50	579.21
3)	ಮಾಂಬಳ್ಳಿ	45	374.94
4)	ಚಾಮರಾಜನಗರ	43	472.57

ಈ) ಬಂಡವಾಳ ಹೂಡಿಕೆ ರೂ. 27.93 ಕೋಟಿ ಸಧ್ಯದ ಪರಿಸ್ಥಿತಿಯಲ್ಲಿ ಅನುಭವಿಸುತ್ತಿರುವ ನಷ್ಟ ರೂ. 734.83 ಲಕ್ಷಗಳು

ಉ) ನಷ್ಟ ಅನುಭವಿಸುತ್ತಿರುವ ಕಾರ್ಖಾನೆಗಳ (ಕಂಪನಿಯು) ಪುನಶ್ಚೇತನಕ್ಕಾಗಿ ಐ.ಡಿ.ಬಿ.ಐ. ಹಣಕಾಸು ಸಂಸ್ಥೆಯನ್ನು ಕೋರಲಾಗಿ ಐ.ಡಿ.ಬಿ.ಐ. ಸಂಸ್ಥೆಯು ವಿವರವಾಗಿ ಅಧ್ಯಯನ ನಡೆಸಿ ಕೆಲವು ರಿಯಾಯಿತಿ ಮತ್ತು ಪರಿಹಾರವನ್ನು ನೀಡಿರುತ್ತದೆ. ಸಧ್ಯದ ಪರಿಸ್ಥಿತಿಯಲ್ಲಿ ನಿಗಮನ ನಷ್ಟದ ಪ್ರಮಾಣವನ್ನು ಕಡಿಮೆ ಮಾಡಿಕೊಂಡು ಅಭಿವೃದ್ಧಿ ಪಥದತ್ತ ಸಾಗುತ್ತಿದೆ.

ಊ) ಹೌದು.

ಋ) 1) ಹಾಲಿ ಇರುವ ಬೇಸಿನ್ಗಳ ಜೊತೆಗೆ ಪ್ರತಿ ಕಾರ್ಖಾನೆಯಲ್ಲೂ 20 ಬೇಸಿನ್ಗಳನ್ನು ಹೆಚ್ಚಿಸುವ ಕ್ರಮ ಪರಿಶೀಲನೆಯಲ್ಲಿದೆ.

2) ಪ್ರತಿ ಘಟಕದಲ್ಲಿ ಮಲ್ಟಿ ಎಂಡ್ ಬೇಸಿನ್ಗಳನ್ನು ಸ್ಥಾಪಿಸಲಾಗುವುದು

ಜವಳಿ ಖಾತೆಯ ನೂಲಿನ ಗಿರಣಿಗಳ ಕುರಿತು

717 - ಶ್ರೀ ಮಂಜನಾಥ್ ಸಿ. ಕುನ್ನೂರ (ಶಿಗ್ಗಾಂವ) : ಮಾನ್ಯ ಜವಳಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ಸಹಕಾರೀ ನೂಲಿನ ಗಿರಣಿಗಳಿವೆ ಅವುಗಳ ಲಾಭ ಮತ್ತು ನಷ್ಟಗಳ ವಿವರ ನೀಡುವುದು?

ಆ) ಹೊಸದಾಗಿ ಯಾವ ಸಹಕಾರಿ ನೂಲಿನ ಗಿರಣಿಗಳಿಗೆ ಪರವಾನಗಿ ನೀಡಲಾಗಿದೆ?

ಇ) ಸದರೀ ಸಹಕಾರಿ ನೂಲಿನ ಗಿರಣಿಗಳಿಗೆ ಯಾವ ಯಾವ ಯೋಜನೆಗಳಲ್ಲಿ ಮತ್ತು ಎಲ್ಲಿಂದ ಆರ್ಥಿಕ ಸಹಾಯ ಮಾಡಲಾಗುವುದು?

ಈ) ಹೊಸ ಜವಳಿ ನೀತಿಯ ಕಾರ್ಯಕ್ರಮಗಳೇನು ?

ಶ್ರೀ ಹೆಚ್.ಕೆ. ಪಾಟೀಲ್ (ಜವಳಿ ರಾಜ್ಯ ಸಚಿವರು) :

ಅ) ಸಹಕಾರ ರಂಗದಲ್ಲಿ 18 ಗಿರಣಿಗಳು ನೋಂದಾಯಿತವಾಗಿದ್ದು, ಅವುಗಳಲ್ಲಿ 12 ಗಿರಣಿಗಳು ಕೆಲಸ ಮಾಡುತ್ತಿದ್ದು 6 ಗಿರಣಿಗಳು ಇನ್ನೂ ಪ್ರಾರಂಭವಾಗಬೇಕಾಗಿದೆ. (ಲಾಭ ನಷ್ಟದ ವಿವರ ಅನುಬಂಧದಲ್ಲಿ ಕೊಡಲಾಗಿದೆ)

ಆ) ಹೊಸದಾಗಿ ಯಾವ ಸಹಕಾರಿ ನೂಲಿನ ಗಿರಣಿಗಳಿಗೂ ಪರವಾನಿಗೆ ನೀಡಿರುವುದಿಲ್ಲ.

ಇ) ಈ ಕೆಳಗಿನ ಸಹಕಾರಿ ನೂಲಿನ ಗಿರಣಿಗಳಿಗೆ ಎನ್ಸಿಡಿಸಿ 4ನೇ ಯೋಜನೆಯಲ್ಲಿ ವಿಶ್ವಬ್ಯಾಂಕ್ ಧನಸಹಾಯದೊಂದಿಗೆ ಪ್ರಾರಂಭಿಸಲು ಸರ್ಕಾರದಿಂದ ಎನ್ಸಿಡಿಸಿ ಕೇಂದ್ರ ಕಛೇರಿಗೆ ಕಳುಹಿಸಲಾಗಿದೆ.

ಅ) ಸಿದ್ದೇಶ್ವರ ಸಹಕಾರಿ ನೂಲಿನ ಗಿರಣಿ, ಚಿಕ್ಕೋಡಿ, ಬೆಳಗಾಂ ಜಿಲ್ಲೆ.

ಆ) ಸಂಜಯ ಸಹಕಾರ ನೂಲಿನ ಗಿರಣಿ, ಹುಬ್ಬಳ್ಳಿ, ಧಾರವಾಡ ಜಿಲ್ಲೆ.

ಇ) ಸಹ್ಯಾದ್ರಿ ಸಹಕಾರಿ ನೂಲಿನ ಗಿರಣಿ, ಚನ್ನಗಿರಿ, ಶಿವಮೊಗ್ಗ ಜಿಲ್ಲೆ.

ಆದರೆ ಎನ್ಸಿಡಿಸಿ 4ನೇ ಯೋಜನೆಯ ವಿಶ್ವಬ್ಯಾಂಕಿನ ಅನುಮೋದನೆ ನೀಡುವುದು ತಡವಾಗಿರುವುದರಿಂದ ಜೂನ್ 94ಕ್ಕೆ ಮೊದಲು ಕಾರ್ಯರೂಪಕ್ಕೆ ಬರುವುದಿಲ್ಲವೆಂದು ತಿಳಿಸಿರುತ್ತಾರೆ. ಈಗ ಸಧ್ಯಕ್ಕೆ ಅನಿವಾಸಿ ಭಾರತೀಯರ ಸಂಘಗಳಿಂದ ಸಾಲ ಪಡೆಯುವ ಬಗ್ಗೆ ಪ್ರಯತ್ನಗಳನ್ನು ಮಾಡಲಾಗುತ್ತಿದೆ.

ಈ) ಜವಳಿ ಉದ್ಯಮದ ಸಮಗ್ರ ಅಭಿವೃದ್ಧಿಗೆ ಸಂಬಂಧಿಸಿದಂತೆ ಜವಳಿ ನೀತಿಯಲ್ಲಿ ಕಾರ್ಯಕ್ರಮಗಳನ್ನು ರೂಪಿಸಿದೆ. ರಾಜ್ಯದಲ್ಲಿ ನೂಲಿನ ಗಿರಣಿಗಳ ಕ್ಷೇತ್ರದ ಅಭಿವೃದ್ಧಿಗೆ ಸಂಬಂಧಿಸಿದಂತೆ ಈ ಕೆಳಗಿನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಅ) ರಾಜ್ಯದಲ್ಲಿ ಲಭ್ಯವಿರುವ ಸಂಪನ್ಮೂಲ ಬಳಸಿ ಸಹಕಾರ ಹಾಗೂ ಖಾಸಗಿ ಕ್ಷೇತ್ರದಲ್ಲಿ ಸ್ಥಾಪಿಸಲ್ಪಡುವ ಎಲ್ಲಾ ಜವಳಿ ಘಟಕಗಳಿಗೆ ನೆರವು ಸೌಲಭ್ಯ ಹಾಗೂ ಪ್ರೋತ್ಸಾಹ ನೀಡುವುದು.

ಆ) ಎಸ್.ಸಿ.ಡಿ.ಸಿ. ಐ.ಡಿ.ಬಿ.ಐ ನಬಾರ್ಡ್ ಹಾಗೂ ಇತರ ಹಣಕಾಸು ಸಂಸ್ಥೆಗಳಿಂದ ರಾಜ್ಯದ ಜವಳಿ ಉದ್ಯಮಕ್ಕೆ ನೆರವು ದೊರಕಿಸುವುದು.

ಇ) ಆ ಸಂಪ್ರದಾಯಕ ಸಂಪನ್ಮೂಲ ಬಳಸಿ ಮಾಲು ಉತ್ಪಾದಿಸಲು ಈ ದಿಸೆಯಲ್ಲಿ ಸಂಶೋಧನಾ ಕಾರ್ಯಕ್ರಮಗಳಿಗೆ ಪ್ರೋತ್ಸಾಹಿಸುವುದು.

ಈ) ನೂಲಿನ ಗಿರಣಿಗಳಲ್ಲಿ ಕೆಲಸ ಮಾಡುವ ಕಾರ್ಮಿಕರ ವೃತ್ತಿ ಕೌಶಲ್ಯ, ದಕ್ಷತೆ ಹಾಗೂ ಉತ್ಪಾದಕತೆಯನ್ನು ಉತ್ತಮಪಡಿಸಲು ನೂಲಿನ ಗಿರಣಿಗಳ ಕೆಲಸಗಾರರ ತರಬೇತಿಗೆ ವ್ಯವಸ್ಥೆಯನ್ನು ರೂಪಿಸುವುದು.

ಉ) ರೋಗಗ್ರಸ್ಥ ಹಾಗೂ ಮುಚ್ಚಲ್ಪಟ್ಟಿರುವ ಜವಳಿ ಕಾರ್ಖಾನೆಗಳನ್ನು ಪುನರಾರಂಭಿಸಲು ಈಗಾಗಲೇ ಬಿ.ಐ.ಎಫ್.ಆರ್. ಮಾದರಿಯಲ್ಲಿ ಖಾಸಗಿವಲಯದ ಕೈಗಾರಿಕೆಗಳಿಗೆ ಇರುವಂತೆಯೇ ಸಹಕಾರಿ ಕ್ಷೇತ್ರಕ್ಕೂ ಅದೇ ರೀತಿಯ ಕಾರ್ಯಕ್ರಮಗಳನ್ನು ರೂಪಿಸಲಾಗುವುದು.

ಊ) ರಾಜ್ಯದಲ್ಲಿ ನೂಲಿನ ಗಿರಣಿಗಳಿಗೆ ಸಂಶೋಧನೆ ಅಭಿವೃದ್ಧಿ ತಂತ್ರಜ್ಞಾನ ತರಬೇತಿ, ಮಾರ್ಗದರ್ಶನ ನೀಡಲು ನೂಲಿನ ಗಿರಣಿಗಳ ಸೇವಾಕೇಂದ್ರ ಸ್ಥಾಪಿಸುವುದು.

ಋ) ಜವಳಿ ಕ್ಷೇತ್ರದ ಎಲ್ಲಾ ಅಂಗದಲ್ಲಿ ಆಧುನೀಕರಣಕ್ಕೆ ಆದ್ಯತೆ ನೀಡುವುದು.

ಅನುಬಂಧ

ರಾಜ್ಯದಲ್ಲಿರುವ ಸಹಕಾರಿ ನೂಲಿನ ಗಿರಣಿಗಳ ಲಾಭ ನಷ್ಟದ ವಿವರಗಳು

ಕ್ರ.ಸಂ	ಗಿರಣಿಯ ಹೆಸರು		ಲಾಭ ನಷ್ಟ 1992-93
1)	ಗದಗ್ ಸಹಕಾರಿ ನೂಲಿನ ಗಿರಣಿ, ಹುಲಕೋಟಿ	(+)	14.43
2)	ಬನಹಟ್ಟಿ ಸಹಕಾರಿ ನೂಲಿನ ಗಿರಣಿ (ನಿ)	(+)	91.54
3)	ರೈತರ ಸಹಕಾರಿ ನೂಲಿನ ಗಿರಣಿ, ಹುಲಕೋಟಿ	(-)	145.50
4)	ಬೆಳಗಾಂ ಸಹಕಾರಿ ನೂಲಿನ ಗಿರಣಿ (ನಿ)	(-)	13.01
5)	ಮಲಪ್ರಭಾ ಸಹಕಾರಿ ನೂಲಿನ ಗಿರಣಿ, ಸವದತ್ತಿ	(-)	268.82
6)	ತುಂಗಭದ್ರಾ ಸಹಕಾರಿ ನೂಲಿನ ಗಿರಣಿ, ರಾಣೆಬೆನ್ನೂರ	(-)	88.50
7)	ಶ್ರೀ ಸೋಮೇಶ್ವರ ಸಹಕಾರಿ ನೂಲಿನ ಗಿರಣಿ, ಲಕ್ಷ್ಮೇಶ್ವರ	(-)	191.90
8)	ಬಿಜಾಪುರ ಸಹಕಾರ ನೂಲಿನ ಗಿರಣಿ (ನಿ)	(-)	185.05
9)	ಬಾಗಲಕೋಟೆ ಸಹಕಾರಿ ನೂಲಿನ ಗಿರಣಿ (1-7-91ರಿಂದ 31-3-93)	(-)	195.69
10)	ಸಹಕಾರಿ ನೂಲಿನ ಗಿರಣಿ ರಾಯಚೂರು (1-7-91 ರಿಂದ 31-3-93)	(-)	89.72
11)	ಶ್ರೀ ವೆಂಕಟೇಶ್ ಸಹಕಾರಿ ನೂಲಿನ ಗಿರಣಿ, ಅಣ್ಣಿಗೇರಿ	(-)	105.03
12)	ರೈತರ ಸಹಕಾರಿ ನೂಲಿನ ಗಿರಣಿ (ನಿ) ರಾಣೆಬೆನ್ನೂರು ಈಗ ತಾನೇ ಉತ್ಪಾದನೆಯನ್ನು ಪ್ರಾರಂಭಿಸಿದೆ.		

ಸ್ಥಾಪನೆಯಾಗಬೇಕಾಗಿರುವ ನೂಲಿನ ಗಿರಣಿಗಳು

1) ಶ್ರೀ ಸಿದ್ದೇಶ್ವರ ಸಹಕಾರಿ ನೂಲಿನ ಗಿರಣಿ (ನಿ) ಚಿಕ್ಕೋಡಿ, ಬೆಳಗಾವಿ ಜಿಲ್ಲೆ.
2) ಮಹಾವೀರ ಸಹಕಾರಿ ನೂಲಿನ ಗಿರಣಿ (ನಿ) ಬೆಡಕಿಹಾಳ್, ಬೆಳಗಾವಿ ಜಿಲ್ಲೆ
3) ಸಂಜಯ ಸಹಕಾರಿ ನೂಲಿನ ಗಿರಣಿ (ನಿ) ಹುಬ್ಬಳ್ಳಿ
4) ಸಹ್ಯಾದ್ರಿ ಸಹಕಾರಿ ನೂಲಿನ ಗಿರಣಿ (ನಿ) ಚನ್ನಗಿರಿ, ಶಿವಮೊಗ್ಗ ಜಿಲ್ಲೆ
5) ರಾಯ್ಚೂಗ್ ಸಹಕಾರಿ ನೂಲಿನ ಗಿರಣಿ (ನಿ) ರಾಯ್ಚೂಗ್
6) ಮುಲಗುಂದ್ ಸಹಕಾರಿ ನೂಲಿನ ಗಿರಣಿ (ನಿ) ಮುಲಗುಂದ್, ಧಾರವಾಡ ಜಿಲ್ಲೆ.

ಸಣ್ಣ ಕೈಗಾರಿಕಾ ಇಲಾಖೆಯ ಕೈಗಾರಿಕಾ ವಸಾಹತು

718 - ಶ್ರೀ ಮಂಜುನಾಥ್ ಸಿ. ಕುನ್ನೂರು (ಶಿಗ್ಗಾಂವ) : ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?